**M.V.C.No. 1020/2025**
**PW1**

ದಿನಾಂಕ 10.06.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿ ನನ್ನ ಸಹಿ ಇದೆ.

ಅಪಘಾತದ ಬಗ್ಗೆ ನನ್ನ ಜೊತೆ ಪ್ರಯಾಣಿಸುತ್ತಿದ್ದ ಭವ್ಯ ಎನ್ನುವವರು ಪೊಲೀಸರಿಗೆ ನೀಡಿದ ದೂರಿನ ನೈಜ ಪ್ರತಿಯನ್ನು ನಿಪಿ-1 ಎಂದು, ಆ ಬಗ್ಗೆ ಸುಬ್ರಹ್ಮಣ್ಯ ಪೊಲೀಸರು ದಾಖಲಿಸಿದ ಪ್ರ.ವ. ವರದಿಯ ನೈಜ ಪ್ರತಿಯನ್ನು ನಿಪಿ-2 ಎಂದು, ಅಪರಾಧ ವಿವರ ನಮೂನೆ / ಸ್ಥಳ ಮಹಜರಿನ ನೈಜ ಪ್ರತಿಯನ್ನು ನಿಪಿ-3 ಎಂದು, ಘಟನಾ ಸ್ಥಳದ ಕರಡು ನಕ್ಷೆಯ ನೈಜ ಪ್ರತಿಯನ್ನು ನಿಪಿ-4 ಎಂದು, ಅಪಘಾತದ ಬಗ್ಗೆ ಸುಬ್ರಹ್ಮಣ್ಯ ಪೊಲೀಸರು ನೀಡಿದ ವರದಿಯ ನೈಜ ಪ್ರತಿಯನ್ನು ನಿಪಿ-5 ಎಂದು, ಎಂ.ವಿ.ಎ ವರದಿಯ ನೈಜ ಪ್ರತಿಯನ್ನು ನಿಪಿ-6 ಎಂದು, ಗಾಯದ ಪ್ರಮಾಣ ಪತ್ರದ ನೈಜ ಪ್ರತಿಯನ್ನು ನಿಪಿ-7 ಎಂದು, ಸುಬ್ರಹ್ಮಣ್ಯ ಪೊಲೀಸರು ಸಲ್ಲಿಸಿದ ಅಂತಿಮ ವರದಿಯ ನೈಜ ಪ್ರತಿಯನ್ನು ನಿಪಿ-8 ಎಂದು, ಕೆ.ಎಂ.ಸಿ ಆಸ್ಪತ್ರೆಯವರು ನೀಡಿದ ಬಿಲ್ಲನ್ನು ನಿಪಿ-9 ಎಂದು, 20 ವೈದ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ ನಿಪಿ-10 ಎಂದು, 10 ಆಂಬ್ಯುಲೆನ್ಸ್‌ನ ಬಿಲ್ಲುಗಳನ್ನು ಒಟ್ಟಾಗಿ ನಿಪಿ-11 ಎಂದು, ಕೆ.ಎಂ.ಸಿ ಆಸ್ಪತ್ರೆಯವರು ನೀಡಿದ ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ-12 ಎಂದು, ಕಸ್ತೂರ್ಬಾ ಆಸ್ಪತ್ರೆಯವರು ನೀಡಿದ ಹೊರರೋಗಿ ಚೀಟಿಯನ್ನು ನಿಪಿ-13 ಎಂದು, ಎಸ್.ಎಸ್.ಪಿ.ಯು ಕಾಲೇಜಿನ ಪ್ರಾಂಶುಪಾಲರು ನೀಡಿದ ವೇತನ ದೃಢೀಕರಣ ಪತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿದಂತೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ.ಎ.ಕೆ ಹಾಗೂ ಎಂ.ಪಿ.ಜಿ ವಕೀಲರಿಂದಃ</u>

(ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ